ಜಮೆ ಮಾಡುತ್ತಾರೆ. ಕೋರ್ಟ್ ನಮಗೆ ಹಣ ಯಾವಾಗ ಕೊಡುತ್ತದೋ ಗೊತ್ತಿಲ್ಲ'' ಚಂದ್ರು ಹೇಳಿದ.

ಚಂದ್ರು ಅನ್ನ ಕಲಿಸುತ್ತ, "ಹೇಳುವವರು ಹೇಳಿದರೆ ಸರಿಯಾಗುತ್ತದೆ. ಅವರು ನಮ್ಮ ಮಾತು ಎಲ್ಲಿ ಕೇಳುತ್ತಾರೆ... ಮೊದಲು ಹಣವೇ ಇಲ್ಲವೆಂದರು. ನಂತರ ಲಕ್ಷ ರೂಪಾಯಿ ಕೊಡುತ್ತೇವೆಂದರು. ಅವರಿಗೆ ಒತ್ತಡ ಹಾಕಿದ್ದಕ್ಕೆ ಸ್ವಲ್ಪ ಬಗ್ಗಿದರೆಂದುಕೊಂಡೆ. ನಮಗೇ ಕೊಡಿ ಎಂದರೆ, ಐದು ಕಡಿಮೆ ಇದೆ, ಹತ್ತು ಕಡಿಮೆಯಿದೆ ಎಂದು ಅಳು, ಬೊಬ್ಬೆಗಳು..." ಎಂದ.

ಇಬ್ಬರ ಮಾತು ಕೇಳುತ್ತ ಕಣ್ಣು ಮುಚ್ಚಿದಳು ಸಾವಿತ್ರಿ. ಇಲ್ಲಿನ ಕಷ್ಟದ ಜೀವನ ನೋಡುತ್ತಿದ್ದರೆ ಹೊಸ ಆಲೋಚನೆಗಳು ಬರುತ್ತಿವೆ. ಊರಿನಲ್ಲಿರುವಾಗ ಒಡಲಶೋಕದಿಂದ ಒಂಟಿಯಾಗಿ ಮರಳುಗಾಡಿನತ್ತ ನೋಡಿದಳು. ಈಗ ಮರಳುಗಾಡಿನಿಂದ ಹಳ್ಳಿಗಳತ್ತ ನೋಡುತ್ತಿದ್ದರೆ ಸಾವಿರಾರು ಮಂದಿ ತನ್ನಂತಹ ತಾಯಂದಿರು ಕಾಣಿಸುತ್ತಿದ್ದಾರೆ. ನೋವನ್ನು ವ್ಯಕ್ತಿಯಿಂದ ಸಮೂಹದತ್ತ, ಸಮೂಹದಿಂದ ವ್ಯಕ್ತಿಗತವಾಗಿ ನೋಡುತ್ತಿದ್ದಾಳೆ.

"ದೊಡ್ಡಮ್ಮ... ಅಡುಗೆ ರೆಡಿ... ಎದ್ದು ರೆಡಿಯಾಗು. ನಾವು ಕರೆಕ್ಟಾಗಿ ಹನ್ನೆರಡು ಗಂಟೆಗೆ ಅಲ್ಲಿರಬೇಕು. ಹೇಳಿದೆನಲ್ಲವಾ. ಇಲ್ಲಿ ಟೈಂ ಅಂದರೆ ಟೈಂ ಅಷ್ಟೆ..." ಚಂದ್ರು ಹೇಳಿದ.

ಆಗಲೇ ಕಾರಿನ ಹಾರನ್ ಸದ್ದು ಮೊಳಗಿತು. ''ಅಗೋ... ಕಾರು ಕೂಡ ಬಂದಿದೆ'' ರವಿ ಹೇಳಿದ.

ಅರ್ಧ ಗಂಟೆಯಲ್ಲಿ ಮೂವರು ರೆಡಿಯಾಗಿ ಕಾರಿನಲ್ಲಿ ಕುಳಿತರು. ಮತ್ತೆ ಅರ್ಧ ಗಂಟೆಯಲ್ಲಿ ಕೋರ್ಟ್ ಮುಂದೆ ಇದ್ದರು.

ಕಾರು ಇಳಿಯುತ್ತಿರುವಾಗ ಮತ್ತೊಮ್ಮೆ ನೆನಪು ಮಾಡುತ್ತ, "ದೊಡ್ಡಮ್ಮಾ... ಇಲ್ಲಿ ವಾದಗಳಿರುವುದಿಲ್ಲ ನಾವು ಮಾತನಾಡುವುದಕ್ಕೆ ಏನೂ ಇರುವುದಿಲ್ಲ 'ತಾನಾಜಿಲ್' ಅಷ್ಟೇ! ಒಂದೇ ಮಾತು'' ಅಂದ ಚಂದ್ರು.

ನೋವಿನಿಂದ ಚಂದ್ರುವಿನತ್ತ ನೋಡಿದಳು ಸಾವಿತ್ರಿ. ಇವನಿಗೆ ಮೋಸ ಮಾಡುತ್ತಿರುವೆನಾ ಎಂದು ಮತ್ತೊಮ್ಮೆ ಅಂದುಕೊಂಡಳು.

'ಚಂದ್ರು... ನನ್ನ ಮಗನನ್ನು ಸಾಯಿಸಿದವನು ಬದುಕುವುದು ಸಾಧ್ಯವಿಲ್ಲ. ಅವನ ಸಾವನ್ನು ಮಾರಿಕೊಳ್ಳುವಷ್ಟು ನೀಚಳಲ್ಲ. ನಾನು ಯಾರನ್ನೂ ಕ್ಷಮಿಸುವುದಿಲ್ಲ ಕಣೋ' ಎಂದು ಈ ಕೊನೆಯ ಕ್ಷಣದಲ್ಲಾದರೂ ಹೇಳಬೇಕೆಂದುಕೊಂಡಳು. ಹೇಳಲು ಮನಸೊಪ್ಪಲಿಲ್ಲ. ಹೇಳಿದರೆ ಕೋರ್ಟ್ ಒಳಗೆ ಕೂಡ ಕರೆದುಕೊಂಡು ಹೋಗುವುದಿಲ್ಲವೆಂದು ಗೊತ್ತು. ಮನಸಿನ ಭಾವನೆಯನ್ನು ಮನಸಿನಲ್ಲಿಯೇ ಮುಚ್ಚಿಟ್ಟುಕೊಂಡು ಮುಂದಕ್ಕೆ ನಡೆದಳು.

ಕೋರ್ಟ್ ಹಾಲ್ ಎಂದರೆ ಬಹಳ ದೊಡ್ಡದಾಗಿರುತ್ತದೆಂದುಕೊಂಡಿದ್ದಳು. ನಾಲ್ಕು ಕೋಣೆಗಳು ಒಂದು ಹಾಲ್ ಇರುವ ಚಿಕ್ಕ ಬಂಗಲೆ. ಸುತ್ತಲೂ ಗೋಡೆಯ ಕಾಂಪೌಂಡ್. ಎತ್ತರವಾಗಿ ಬೆಳೆದಿರುವ ಖರ್ಜೂರದ ಮರಗಳು. ಒಂದಿಬ್ಬರನ್ನು ಬಿಟ್ಟರೆ ಹೆಚ್ಚಿನ ಗದ್ದಲವಿಲ್ಲ. ಹಾಲ್ ಮುಂದೆ ವರಾಂಡಾದಲ್ಲಿ ಒಬ್ಬ ಮಹಿಳೆ ಮಾತ್ರ ದೀನಳಾಗಿ ಕುಳಿತಿದ್ದಾಳೆ. ನೋಡಲು ಮತ್ತು ಉಡುಗೆ ತೊಡುಗೆಗಳು ತನ್ನಂತೆಯೇ ಇವೆ. ಆಕೆಯನ್ನು ನೋಡುತ್ತಲೇ ತನ್ನಂತೆಯೇ ಹೊಟ್ಟೆಗೆ ಬೆಂಕಿ ಬಿದ್ದಿರುವ ತಾಯಿ ಎಂದುಕೊಂಡಳು.

ಕೆದರಿದ ಕೂದಲು, ಮಾಸಿದ ಬಟ್ಟೆಗಳು, ಬಿಳಚಿಕೊಂಡಿರುವ ಮುಖ. ಕದಲಿಸಿದರೆ ಕಟ್ಟೆಯೊಡೆದು ಬರುವಷ್ಟು ದುಃಖದಲ್ಲಿರುವ ಶೋಕದೇವತೆಯಂತಿದ್ದಾಳೆ. ಹೋಗಿ ಆಕೆಯ ಪಕ್ಕದಲ್ಲಿಯೇ ಕುಳಿತಳು ಸಾವಿತ್ರಿ.

'ಮಾತನಾಡಲಾ... ಏನೆಂದು ಮಾತನಾಡಿಸುವುದು' ಎಂದುಕೊಳ್ಳುವಷ್ಟರಲ್ಲಿಯೇ ಆಕೆಯೇ